ಮಲ್ಲಿಕಾರ್ಜುನ ಹ, ಬಗಲಿ, ಜತ್ತ
ಮಂಗನಿಂದ ಮಾನವ ಅಂತಾರೆ. ಆದರೆ ಇಂದಿನ ಮಂಗಗಳು ಮಾನವರಾಗಿರುವುದಿಲ್ಲ. ಏಕೆ?



ಮಾನವನಾದ ಮಂಗಗಳ ಅವಸ್ಥೆ ನೋಡಿ 'ಸ್ವಜನ್ಮೇ ನಿಧನಂ ಶ್ರೇಯಃ' ಎಂದು ತೀರ್ಮಾನಿಸಿದವಂತೆ.

ವಿ. ಮಾಧವ ಶಾನುಭಾಗ, ಕುಂದಾಪುರ
ಕೃಷ್ಣಾರ್ಜುನರದು ಬಹುಪತ್ನಿತ್ವ; ಇಬ್ಬರೂ ತಮ್ಮ ಮಾವಂದಿರ ಮೇಲೆ ದಾಳಿಗೈದರು. ಈ ಸಮಾನಮನವೇ ಅವರ ಸ್ನೇಹಕ್ಕೆ ಕಾರಣವೆ?
ಸೂಪರ್! ಬಿಲ್ವಿದ್ಯೆ, ಧರ್ಮಪರತೆ, ನಾಟ್ಯ, ಸಂಗೀತಗಳನ್ನು ಬಿಟ್ಟು ತರ್ಕಬದ್ಧವಾಗಿ ಯೋಚಿಸುವುದು ಕಾವ್ಯದಲ್ಲಿ ಅಲ್ಲ.

ಕೆ.ಎಂ. ವಿಭೂತಿ, ಹರಿಹರ
ಶಿಲಾಯುಗದಿಂದ ತಂತ್ರಜ್ಞಾನದ ಯುಗಕ್ಕೆ ಬಂದರೂ ಪೂರ್ವಜರ ಮಂಗನ ಬುದ್ಧಿ ಹೋಗುತ್ತಿಲ್ಲವೇಕೆ?



ನರನೆಂಬ ಸಿಸ್ಟಮ್‌ನ ಮೆದುಳೆಂಬ ಮದರ್ ಬೋರ್ಡ್‌ನಿಂದ ಮಂಗನಬುದ್ಧಿಯೆಂಬ ವೈರಸ್ ಡಿಲೀಟ್ ಆಗದಾದ್ದರಿಂದ.

ಬಿ. ಚಂದ್ರೇಗೌಡ, ಬೆಂಗಳೂರು
ಜ್ಯೋತಿ ಬೆಳಗುವುದಕ್ಕೂ, ಬಾಳು ಬೆಳಗುವುದಕ್ಕೂ ಏನು ವ್ಯತ್ಯಾಸ?
ಜ್ಯೋತಿ ಬೆಳಗಲು ಎಣ್ಣೆ, ಬತ್ತಿ ಬೇಕು; ಬಾಳು ಬೆಳಗಲು 'ಎಣ್ಣೆ' ಹಾಕುವುದು, 'ಬತ್ತಿ' ಇಡುವುದರಿಂದ ದೂರವಿರಬೇಕು.

ನಾರಾಯಣ ಯಾಜಿ, ಶಿರಾಲಿ
ವೈದ್ಯರದು, ವಕೀಲರದು ಉತ್ಕೃಷ್ಟ ಸೇವೆಯಂತೆ. ಮಕ್ಕಳಿಗಾಗಿ ಬೆಟ್ಟದಷ್ಟು ಕಷ್ಟ ಸಹಿಸುವ ಅಮ್ಮನದು?
ಛೆ! ಸುಮ್ಮನಿರಿ. ಅದಕ್ಕೊಂದು ವಿಶೇಷಣವಿತ್ತು ಆ ಸೇವೆಯ ಮೌಲ್ಯವನ್ನು ಹಾಗೆಲ್ಲ ತಗ್ಗಿಸಬಾರದು.

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು
ಈ ದಿನ ಮತ್ತೆ ಮತ್ತೆ ಏಕೆ ಬರುವುದಿಲ್ಲ?
ಬರುತ್ತದಲ್ಲ! ನೆನ್ನೆ ಹೋಯಿತು. ನಾಳೆ ಬರುವುದೇ ಇಲ್ಲ. ಎಂದೆಂದಿಗೂ ಇರುವುದು ಈ ದಿನವೇ.

ಪಿ. ಗೋವಿಂದರಾಜ್, ಶಿವಮೊಗ್ಗ
ರಕ್ತದಾನ, ಅನ್ನದಾನ, ಮತದಾನ, ಕನ್ಯಾದಾನ, ನೇತ್ರದಾನ; ಇವುಗಳಲ್ಲಿ ಶ್ರೇಷ್ಠ ದಾನ ಯಾವುದು?
ನೇತ್ರದಾನವೇ. ಮಿಕ್ಕವೆಲ್ಲ ಈ ಜನ್ಮಕ್ಕೆ ಸೀಮಿತ. ನೇತ್ರದಾನದಿಂದ ನೆಕ್ಸ್ಟ್ ಜನರೇಷನ್ ಬ್ಯೂಟಿಗಳನ್ನೂ ನೋಡಬಹುದು!

ಎಚ್.ಆರ್. ದೇಸಾಯಿ, ರಾಯಚೂರು
ಹೆಣ್ಣು ತಾನಾಗಿಯೇ ಬಯಸಿಬಂದು ಅಪ್ಪಿಕೊಂಡರೆ ಅದು ಮೀ ಟೂ ಎನಿಸಿಕೊಳ್ಳುವುದಿಲ್ಲವೆ?
ಪ್ರಶ್ನೆ ಅಪೂರ್ಣ. ಅಸಲಿಗೆ ಅವಳು ಬಯಸಿದ್ದು ಗಂಡನ್ನೋ, ಪ್ರಚಾರವನ್ನೋ?

ಬಿದರಹಳ್ಳಿ ಚೆನ್ನವೀರಪ್ಪ, ಹೂವಿನಹಡಗಲಿ
ವೀಣೆಗೂ, ತಂತಿಗೂ ಸಂಬಂಧ ಕೆಟ್ಟರೆ ಹೇಗೆ?
ರಾಗ ಹಿಂಸೆದ್ವನಿ, ತಾಳ ಅಟ್ಟುತಾಳದಲ್ಲಿ ನವಸ್ಲಂಗೀತದ ಉದಯ; ಹತ್ತಿರದ ಕರ್ಣವೈದ್ಯರಿಗೆ ಧನಲಾಭ.

ರವಿಕಾಂತ ಎಂ.ಕೆ., ತುಮಕೂರು
ಸಂತೋಷ ಎಂದು ಹೆಸರು ಇಟ್ಟುಕೊಳ್ಳುತ್ತಾರೆ. ದುಃಖ ಎಂದು ಏಕೆ ಇಟ್ಟುಕೊಳ್ಳುವುದಿಲ್ಲ?
'ದುರಂತ ಎಕ್ಸ್‌ಪ್ರೆಸ್' ಎಂಬ ಟ್ರೈನೇ ಇದೆ. ರೈಲಿಗಿದ್ದ ಮೇಲೆ ಐಲಿಗೂ ಇಂದಲ್ಲ ನಾಳೆ ಬರುತ್ತದೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಇತ್ತೀಚೆಗೆ ನಗರದಲ್ಲಿ ಕಪ್ಪೆ ವಟಗುಟ್ಟುವುದೇ ಕೇಳಿಸದಿರುವ ಕಾರಣ?
ಪಲ್ಯೂಷನ್‌ನಿಂದ ಕಪ್ಪೆಗೆ ಲಾರಿಂಜೈಟಿಸ್ ಆಗಿದೆಯಂತೆ.

## ಬಹುಮಾನಿತ ಪ್ರಶ್ನೆ

ರತ್ನಾ ಅಶೋಕ ಗೊರವರ, ಧಾರವಾಡ
ಕೈ ಹಿಡಿದು 'ಇದು ಕೈಯಲ್ಲ, ಕಾಲು ಅಂತ ತಿಳ್ಕೋ' ಅಂತಾರಲ್ಲ, ನೀವೇನಂತೀರಿ?
'ಹಾಗೆಲ್ಲ ತಿಳ್ಕೊಳಕ್ಕಾಗಲ್ಲ. ಕೈಯಿಂದ ನಡೆಯುವುದು ಬಹಳ ಕಷ್ಟ' ಎನ್ನುತ್ತೇನೆ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಜಾತಿಯ ಭೂತ ಬಿಡುವುದು ಯಾವಾಗ?
ಜಾತಿಯ ಆಧಾರದ ಮೇಲೆ ಬೂತ್‌ನಲ್ಲಿ ಓಟ್ ಹಾಕುವುದು ನಿಂತಾಗ.

ಆರತಿ ಘಟಿಕಾರ್, ದುಬೈ
ಯಾವ ಆಸ್ತಿ ಕಡೆಯವರೆಗೂ ನಮ್ಮೊಡನೆಯೇ ಇರುತ್ತದೆ?
ಹ್ಞ! ಕಡೆಯವರೆಗೆ ಜೊತೆಗಿರುವುದು ಆಸ್ತಿಯಲ್ಲ, ಅಸ್ಥಿ.

ಭಾರತಿ ಮಾನಗೆ, ಹೊನ್ನಾವರ
ಗಾಂಧೀಜಿಯ ಚರಕ ಯಾವುದರ ಸಂಕೇತ?




ದೇಶಕ್ಕೆ ಸ್ವತಂತ್ರದ ನೂಲಿನ, ಬ್ರಿಟಿಷರಿಗೆ ದಬ್ಬಾಳಿಕೆಯ ನೇಣಿನ, ಸಂಕೇತ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಪ್ರಣಯಕ್ಕೂ, ಪ್ರಳಯಕ್ಕೂ ಏನು ವ್ಯತ್ಯಾಸ?
ನೀರು ಉಕ್ಕಿಬಂದರೆ ಪ್ರಳಯ; ನೀರೆ ಸೊಕ್ಕಿ ಬಂದರೆ ಪ್ರಣಯ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ಸಮಯಸಾಧಕರನ್ನು ಏನೆಂದು ಕರೆಯಬೇಕು?
ಅವರನ್ನೇಕೆ ಕರೆಯಬೇಕು! ಸಮಯ ಬಂದಾಗ ಅವರೇ ಬರುತ್ತಾರೆ.

ಎ.ಕೆ. ಪಟ್ಟಾಭಿ, ಬೆಂಗಳೂರು
ಬ್ರಹ್ಮಚಾರಿಗಳಿಗಿಂತ ಸಂಸಾರಿಗಳೇ ಹೆಚ್ಚು ಕಾಲ ಬದುಕಿರುತ್ತಾರೆ. ಇದಕ್ಕೆ ಕಾರಣವೇನು?
ಆದ ತಪ್ಪುಗಳಿಗೆ ಸಂಗಾತಿಯೇ ಹೊಣೆ ಎಂದು ಸಾರಿ ನೆಮ್ಮದಿಯಿಂದ ಇರಬಹುದಾದ್ದರಿಂದ.

■ ರಾಮ್